# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ    Kannada Daily

ಹಾಸನ    E-mail : kannadapostnews@gmail.com    / ಕನ್ನಡ post    Price: ₹1

Vol.No.01 | Issue. 180 | Pages. 2 | Date: 25-05-2025, SUNDAY    RNI NO: KARKAN/2024/89601

ಸಂಪುಟ : 01 - ಸಂಚಿಕೆ : 180 - ಪುಟಗಳು : 2 - 25 ಮೇ 2025 ಭಾನುವಾರ    Ph: 8762954248    ದರ : ₹1


# ಒಡಲು ತುಂಬಿಕೊಂಡ ಯಗಚಿ

## ಬಾಗಿನ ಅರ್ಪಿಸಿದ ಶಾಸಕ ಹುಲ್ಲಳ್ಳಿ ಸುರೇಶ್ : ನಾಲೆಗೆ ನೀರು ಬಿಡುಗಡೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ಮುಂಗಾರು ಅಧಿಕೃತ ಆರಂಭಕ್ಕೂ ಮುನ್ನವೇ ಆರ್ಭಟಿಸಿದ ಪೂರ್ವ ಮುಂಗಾರಿನ ಮಳೆಗೆ ತಾಲೂಕಿನ ಪ್ರಮುಖ ಜಲಾಶಯ ಯಗಚಿ ಭರ್ತಿಯಾಗಿದ್ದು, ಅಣೆಕಟ್ಟೆಯಿಂದ 500 ಕ್ಯೂಸೆಕ್ ನೀರು ಬಿಡುಗಡೆ ಮಾಡಲಾಗಿದೆ.

ಹೌದು; ಇತ್ತೀಚಿನವರೆಗೂ ಜಲಾಶಯ ಭರ್ತಿಗೆ ಜೋರು ಮಳೆಯಾಗುವುದನ್ನು ಕಾಯುತ್ತಿರಬೇಕಿತ್ತು. ಅದರಲ್ಲೂ ಒಳ ಹರಿವು ಹೆಚ್ಚಿರದಿದ್ದರೆ ಅಣೆಕಟ್ಟು ಭರ್ತಿಗೆ ಕಾಯಬೇಕಿತ್ತು.

ಆದರೆ ಜಿಲ್ಲೆಯ ಜಲಾಶಯಗಳಲ್ಲಿ ಒಂದಾಗಿರುವ ಇಲ್ಲಿನ ಯಗಚಿ ಜಲಾಶಯ, ಪೂರ್ವ ಮುಂಗಾರು ಮಳೆಯ ಆರ್ಭಟಕ್ಕೇ ಒಡಲು ತುಂಬಿಕೊಂಡಿದೆ.

ಮೊದಲ ಮಳೆಗೇ ಯಗಚಿ ಡ್ಯಾಂ ಸಂಪೂರ್ಣ ಭರ್ತಿಯಾಗಿದ್ದು, ಶನಿವಾರದಿಂದಲೇ ಡ್ಯಾಂನಿಂದ 500 ಕ್ಯೂಸೆಕ್ ನೀರನ್ನು ಹೊರ ಹರಿಯ ಬಿಡಲಾಗಿದೆ.

ತಾಲ್ಲೂಕಿನ, ಚಿಕ್ಕ ಬ್ಯಾಡಗೆರೆ ಗ್ರಾಮದಲ್ಲಿರುವ ಯಗಚಿ ಜಲಾಶಯ 3.60 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿದ್ದು, ಚಿಕ್ಕಮಗಳೂರು ಹಾಗೂ ಬೇಲೂರು ಭಾಗದಲ್ಲಿ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ಯಗಚಿ ಡ್ಯಾಂ ತುಂಬಿದೆ.

ಸ್ಥಳೀಯ ಶಾಸಕ ಎಚ್.ಕೆ.ಸುರೇಶ್ ಜಲಾಶಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿ ಬಾಗಿನ ಅರ್ಪಿಸಿದರು. ನಂತರ ಬಟನ್ ಒತ್ತುವ ಮೂಲಕ ನಾಲೆಗೆ ನೀರು ಬಿಡುಗಡೆ ಮಾಡಿದರು. ಯಗಚಿ ಜಲಾಶಯದ ಗರಿಷ್ಠ ಮಟ್ಟ 3.162.92 ಅಡಿಗಳಾಗಿದ್ದು, ಇಂದು 3.160.10 ಅಡಿಯಷ್ಟು ನೀರು ಸಂಗ್ರಹವಾಗಿದೆ. ಜಲಾಶಯಕ್ಕೆ 485 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ನಿರಂತರವಾಗಿ ಮಳೆ ಸುರಿಯುತ್ತಿರುವ ಹಿನ್ನಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ನದಿಗೆ ನೀರು ಹರಿಸಲಾಗಿದೆ. ಎಲ್ಲರೂ ರೈತರು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಶಾಸಕರು ಮನವಿ ಮಾಡಿದರು.



# ತಹಸೀಲ್ದಾರ್ ಕಡೆಗೂ ಎತ್ತಂಗಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ಇಲ್ಲಿನ ತಹಸೀಲ್ದಾರ್ ನವೀನ್ ಕುಮಾರ್ .ವಿ.ಎಸ್ ಅವರಿಗೆ ಕೊನೆಗೂ ತಲೆ ದಂಡವಾಗಿದೆ. ಭ್ರಷ್ಟಾಚಾರ ಹಾಗೂ ಸರ್ಕಾರದ ವಿರುದ್ಧ ನಿಂದನೆ ಮಾಡಿದ ಆರೋಪ ಪ್ರಕರಣ ಇವರ ಮೇಲಿತ್ತು. ಹೀಗಾಗಿ ಪ್ರಕರಣವನ್ನು ಗಂಭೀರವಾಗಿ ಪಡೆದಿರುವ ಸರ್ಕಾರ, ಅವರಿಗೆ ಸ್ಥಳವನ್ನು ತೋರಿಸದೆಯೇ ಎತ್ತಂಗಡಿ ಮಾಡಿ ಮುಖ್ಯ ಕಚೇರಿಯಲ್ಲಿ ವರದಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ.

ವರ್ಗಾವಣೆ ಆರ್ಡರ್ ಹೊರಬಿದ್ದ ಕೂಡಲೇ ಪ್ರೊಬೆಷನರಿ ತಹಸಿಲ್ದಾರ್ಗೆ ಸರ್ಕಾರ ವರ್ಗಾವಣೆ ಶಿಕ್ಷೆ ನೀಡಿದೆ.ನವೀನ್‌ಕುಮಾರ್ ವಿರುದ್ಧ ಭ್ರಷ್ಟಾಚಾರ ಹಾಗೂ ಸರ್ಕಾರದ ವಿರುದ್ಧ ನಿಂದನೆ ಆರೋಪ ಪ್ರಕರಣ ಕೇಳಿ ಬಂದ ಹಿನ್ನಲೆಯಲ್ಲಿ ಪ್ರೊಬೆಷನರಿ ಲ್ದಾರ್‌ಗೆ ಸರ್ಕಾರ ವರ್ಗಾವಣೆ ಶಿಕ್ಷೆ ನೀಡಿದೆ. ಕಳೆದ ಏಳು ತಿಂಗಳಿನಿಂದ ಚನ್ನರಾಯಪಟ್ಟಣ ತಾಲ್ಲೂಕಿನ ತಹಸೀಲ್ದಾರ್ ಆಗಿ ಸೇವೆಯಲ್ಲಿದ್ದ ನವೀನ್ ಕುಮಾರ್ ವಿರುದ್ಧ ಕಳೆದ 13 ದಿನಗಳಿಂದ ವಿವಿಧ ಸಂಘಟನೆಗಳು ಭ್ರಷ್ಟಾಚಾರ ವಿರೋಧಿ ಆಂದೋಲನ ಹೆಸರಿನಲ್ಲಿ ಅಹೋರಾತ್ರಿ ಪ್ರತಿಭಟನೆ ನಡೆಸಿದ್ದರು. ರಾಜ್ಯ ಸರ್ಕಾರದ ಉಚಿತ ಕೊಡುಗೆಗಳ ಬಗ್ಗೆ ನವೀನ್‌ಕುಮಾರ್ ಟೀಕೆ ಮಾಡಿದ್ದಲ್ಲದೆ ರಾಜ್ಯ ಸರ್ಕಾರವನ್ನು ಸೂ?. ಸರ್ಕಾರ ಎಂದಿದ್ದ ಬಗ್ಗೆ ಆಡಿಯೋ ವೈರಲ್ ಆಗಿತ್ತು. ಇದಲ್ಲದೆ ನವೀನ್‌ಕುಮಾರ್ ಅವರದ್ದು ಎನ್ನಲಾದ ಹಲವು ಆಡಿಯೋ ವೈರಲ್ ಹಿನ್ನೆಲೆಯಲ್ಲಿ ಕ್ರಮಕ್ಕೆ ಆಗ್ರಹಿಸಿ ವಿವಿಧ ಸಂಘಟನೆಗಳ ಹೋರಾಟ ನಡೆಸುತ್ತಿದ್ದರು. ಜನರ ಹೋರಾಟಕ್ಕೆ ಮಣಿದು ಸ್ಥಳ ನಿಯುಕ್ತಿಗೊಳಿಸದೆ ತಹಸೀಲ್ದಾರ್ ವರ್ಗಾವಣೆ ಮಾಡಿ ಸರ್ಕಾರದ ಆದೇಶಿಸಿದೆ. ಸಾರ್ವಜನಿಕ ದೂರು ಹಿನ್ನೆಲೆಯಲ್ಲಿ ಹುದ್ದೆಯಿಂದ ಹಿಂಪಡೆದಿರುವುದಾಗಿ ಕಂದಾಯ ಇಲಾಖೆಯ ಅಧೀನ ಕಾರ್ಯದರ್ಶಿ ಮುಕ್ತರ್‌ಪಾಷ.ಎಚ್.ಜಿ ಅವರು ವರ್ಗಾವಣೆ ಆದೇಶ ಹೊರಡಿಸಿದ್ದಾರೆ.

# ಕಟ್ಟಾಯ ಹೋಬಳಿಯ ರಸ್ತೆಗಳ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ : ಶಾಸಕ ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಟ್ಟಾಯ ಹೋಬಳಿ ವಿವಿಧ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶನಿವಾರ ಶಾಸಕ ಸಿಮೆಂಟ್ ಮಂಜು ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಸಕಲೇಶಪುರ, ಆಲೂರು. ಕಟ್ಟಾಯ ವಿಧಾನಸಭಾ ಕ್ಷೇತ್ರದ ಸತ್ತಿಗರಹಳ್ಳಿ,ಕಬ್ಬತಿ ಗೊರೂರು ರಸ್ತೆಯಿಂದ ಸತ್ತಿಗರಹಳ್ಳಿ ಕೊಪ್ಪಲು ಹಾಗೂ ಗಾಣಿಗರ ಕೊಪ್ಪಲು ಯಿಂದ ಕಟ್ಟಾಯ, ಗೊರೂರು ರಸ್ತೆವರೆಗೂ ಮರು ಡಾಂಬರೀಕರಣ ಕಾರ್ಯಕ್ರಮ ನೆಡೆಯಲಿದೆ. ರಸ್ತೆ ತೀರಾ ಹಾಳಾಗಿದ್ದು ಈ ಭಾಗದ ಸಾರ್ವಜನಿಕರು ದುರಸ್ತಿ ಪಡಿಸುವಂತೆ ಹಲವು ಬಾರಿ ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ಕಾಮಗಾರಿ ನಡೆಸಲಾಗುತ್ತದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಸಾವಿರಾರು ಕೋಟಿ ರೂಪಾಯಿ ವ್ಯಯಿಸುತ್ತಿರುವುದ್ದರಿಂದ ಮೂಲ ಸೌಕರ್ಯ ಅಭಿವೃದ್ಧಿಗೆ ಅನುದಾನದ ಕೊರತೆ ಎದುರಾಗಿದ್ದು ಬರುತ್ತಿರುವ ಅನುದಾನಕನುಗುಣವಾಗಿ ತುರ್ತು ಅವಶ್ಯಕತೆ ಇರುವ ರಸ್ತೆಗಳ ಅಭಿವೃದ್ಧಿಗೆ ನೀಲಿ ನಕ್ಷೆ ತಯಾರಿಸಿ ಪ್ರಮುಖವಾಗಿ ತೀರ ಹದಗೆಟ್ಟಿರುವ ರಸ್ತೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಮಳೆಗಾಲ ಪ್ರಾರಂಭವಾಗುವುದರೊಳಗೆ ಗುಣಮಟ್ಟದಿಂದ ಕೂಡಿದ ರಸ್ತೆ ಕಾಮಗಾರಿಯನ್ನು ಮುಗಿಸುವಂತೆ ಸೂಚಿಸಿದರು.

ಈ ಸಂಧರ್ಭದಲ್ಲಿ ಪಿಡಿಓ ಪುಷ್ಪಲತಾ, ಕಟ್ಟಾಯ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ಹರೀಶ್ ಕೊಡರಾಮನಹಳ್ಳಿ, ಬೆಜೆಪಿ ಮುಖಂಡರಾದ ಅಮೃತ್ ಕಟ್ಟಾಯ, ನಿತಿನ್ ಗೌಡ ಉಡುವಾರೆ,ಕಿರಣ್, ನಿಸರ್ಗ ಸತೀಶ್, ಚನ್ನಕೇಶವ ಗೌಡ ಕಾರ್ಲೆ, ಜಿ.ಕೆ ಕುಮಾರಸ್ವಾಮಿ,ಮನು, ಗಿರೀಶ್ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಮಕ್ಕಳನ್ನು ಸ್ನೇಹಿತರಂತೆ ಕಾಣಿ: ಮಂಜುನಾಥ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಯಾವುದೇ ಮಕ್ಕಳು ಕಾಲೇಜಿನ ಹಂತಕ್ಕೆ ಬಂದಾಗ ಪೋಷಕರು ಸ್ನೇಹತರಂತೆ ಕಂಡು ಉತ್ತಮ ಸಂಸ್ಕಾರ ಕಲಿಸಿದರೆ ಮಕ್ಕಳು ಸಮಾಜದಲ್ಲಿ ಉತ್ತಮ ಪ್ರಜೆ ಆಗುತ್ತಾರೆ.

ಜೊತೆಗೆ ಮಕ್ಕಳಲ್ಲೂ ಕೂಡ ಒಂದು ಗುರಿ ಇದ್ದು, ಸಾಧನೆ ಮಾಡುವ ಛಲ ಇದ್ದರೆ ಏನಾದರೂ ಸಾಧನೆ ಮಾಡಲು ಸಾಧ್ಯ ಎಂದು ಸಾಮಾನ್ಯ ಜ್ಞಾನದ ಸಂಪನ್ಮೂಲ ವ್ಯಕ್ತಿ

ಮತ್ತು ವಾಗ್ಮಿ ಜಿ.ಎಸ್. ಮಂಜುನಾಥ್ ಅಭಿಪ್ರಾಯಪಟ್ಟರು.

ನಗರದ ಶ್ರೀ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಮಾಸ್ಟರ್ ಪದವಿಪೂರ್ವ ಕಾಲೇಜು ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ 2025-26ನೇ ಸಾಲಿನ ಪ್ರಥಮ ಪಿಯು ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಅರಿವು ಹಾಗೂ ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲದಕ್ಕೂ ತಕ್ಷಣ ಮಿಡಿಯುವುದು ತಾಯಿ ಹೃದಯ, ವಿದ್ಯೆ ಕಲಿಸುವುದು ಗುರುವಿನ ಶಿಕ್ಷಣ, ಆದರೆ ಬುದ್ಧಿ ಹೇಳುವುದು ಕೂಡ ನಮ್ಮ ಧರ್ಮ ಆಗಲೇಬೇಕು. ಮಕ್ಕಳೊಂದಿಗೆ ತಂದೆ, ತಾಯಿ ಸ್ನೇಹಿತರಾಗಿರಬೇಕು. ಮಕ್ಕಳು ಮನೆಯ ಕುಟುಂಬದ ಜೊತೆ ಬಾಂಧವ್ಯ ಹೊಂದಿರಬೇಕು. 16 ವರ್ಷದ ಮಗುವನ್ನು ಸ್ನೇಹಿತರಂತೆ ಕಾಣಬೇಕು. ಸ್ನೇಹಿತರ ವರ್ತನೆ ಆಗಬೇಕಾದರೆ ನಾವು ಮಕ್ಕಳ ಜೊತೆ ಸಮಾಲೋಚನೆ ಆಗಬೇಕು. ಗೃಹಾಶ್ರಮ ಏನಿದೆ ಅದು ಶುದ್ಧವಾಗಿ ಆಗಬೇಕು ಎಂದು ಕಿವಿಮಾತು ಹೇಳಿದರು.

ಮಕ್ಕಳಿಗೆ ಶಿಕ್ಷಣ ಪಡೆಯುವಾಗ ವಾಹನ ಕೊಡಿಸಬೇಡಿ. ವಾಹನ ಚಾಲನೆ ಲೇಸೆನ್ಸ್ ಪಡೆದ ಮೇಲೆ ಗಮನವಹಿಸಬೇಕು. ಮಕ್ಕಳಲ್ಲೂ ಕೂಡ ಒಂದು ಗುರಿ ಇರಬೇಕು. ಸಾಧನೆ ಮಾಡುವ ಛಲ ಇದ್ದರೆ ಏನಾದರೂ ಸಾಧನೆ ಮಾಡಲು ಸಾಧ್ಯ ಎಂದು ಕಿವಿಮಾತು ಹೇಳಿದರು.

ಮಾಸ್ಟರ್ ಕಾಲೇಜಿನ ಮಂಜುನಾಥ್ ಆಶಯ ನುಡಿಯಲ್ಲಿ ಮಾತನಾಡಿ, 240 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಕಾಲೇಜಲ್ಲಿ ಈಗ 800 ವಿದ್ಯಾರ್ಥಿಗಳಿದ್ದಾರೆ. ನೂರಕ್ಕೆ ನೂರು ಪರ್ಸೆಂಟ್ ಫಲಿತಾಂಶ ಬಂದಿದ್ದು, ಹೊರ ಜಿಲ್ಲೆಗಳಿಂದಲೂ ನಮ್ಮ ಕಾಲೇಜಿಗೆ ವಿದ್ಯಾರ್ಥಿಗಳು ಬರುತ್ತಿದ್ದಾರೆ ಎಂದರು.

ಮಾಸ್ಟರ್ ಪಿಯು ಕಾಲೇಜು ಕಾರ್ಯದರ್ಶಿ ಗೌಡೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ಕಲ್ಲುಗಳನ್ನು ವಿಗ್ರಹ ಆಗಿ ರೂಪಿಸುವ ಕಾರ್ಯ ನಮ್ಮದಾಗಿದೆ. ಗಳಿಸಿದ ಜ್ಞಾನ ಉಪಯೋಗಿಸಿಕೊಂಡು ವಿದ್ಯಾರ್ಥಿಗಳನ್ನು ರ‍್ಯಾಂಕ್ ತರುವುದರಿಂದ ಹಿಡಿದು ಮಾನಸಿಕವಾಗಿ ವಿದ್ಯಾರ್ಥಿಯನ್ನು ಸಿದ್ಧಪಡಿಸಬೇಕು. ಮಕ್ಕಳ ಮನಃ ಶಾಸ್ತ್ರ ತಿಳಿದುಕೊಳ್ಳುವುದು ಪೋಷಕರು ಮತ್ತು ಶಿಕ್ಷಕರ ಪಾತ್ರ ಇರುತ್ತದೆ. ಭಾವನಾತ್ಮಕವಾಗಿ ಮಕ್ಕಳೊಂದಿಗೆ ಪೋಷಕರು ತಿಳಿದುಕೊಳ್ಳಲು ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.

ಪಿಯುಸಿ ಹಂತ ಎಂದರೆ ಕಠಿಣವಾದ ಹಂತ. ಮಕ್ಕಳ ಮನಸ್ಸು ಇತರೆ ಕಡೆ ಹೋಗದಂತೆ ನೋಡಿಕೊಂಡಾಗ ಪರಿವರ್ತನೆ ಖಂಡಿತ ಸಾಧ್ಯ. ಇದಕ್ಕೆಲ್ಲ ಪೋಷಕರ ಪಾತ್ರ ಬಹಳ ಮುಖ್ಯ. ಮಕ್ಕಳನ್ನು ತಿದ್ದಲು ಅಪ್ಪ-ಅಮ್ಮ, ಶಿಕ್ಷಕರಿಂದಲೇ ಸಾಧ್ಯ ಎಂದರು. ಮಕ್ಕಳ ಜೊತೆ ಪೋಷಕರು ಅತ್ಯಂತ ಆತ್ಮೀಯ ಸ್ನೇಹಿತರಾಗಿರಬೇಕೇ ಹೊರತು ಅಧಿಕಾರ ಚಲಾಯಿಸಬೇಡಿ. ಇವತ್ತಿನ ಮೊಬೈಲ್ ಯುಗದಲ್ಲಿ ಒಳ್ಳೆಯದಕಿಂತ ಕೆಟ್ಟದ್ದೇ ಜಾಸ್ತಿ. ಸಾಧ್ಯವಾದಷ್ಟು ಸಂಜೆ ಮಕ್ಕಳ ಜೊತೆ ಒಟ್ಟಿಗೇ ಊಟ ಮಾಡಿ. ಮಕ್ಕಳಿಗೆ ಸಂಸ್ಕಾರ ಕಲಿಸಿದರೆ ಮಕ್ಕಳು ನಿಮ್ಮ ಜೊತೆ ಇರುತ್ತಾರೆ. ಮಕ್ಕಳ ಮೇಲೆ ಅಧಿಕಾರ ಚಲಾಯಿಸಿದರೆ ಮುಂದಿನ ಪರಿಣಾಮಕ್ಕೆ ಜವಾಬ್ದಾರಿ ಯಾರಾಗಬಹುದು ಬಗ್ಗೆ ಯೋಚಿಸುವುದು ಉತ್ತಮ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಾಸ್ಟರ್ ಪಿಯು ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಟಿ.ಎ.ಹೆಚ್. ರಾಯುಡು, ಉಪಾಧ್ಯಕ್ಷೆ ಹೆಚ್.ಸಿ. ನಂದಿನಿ ಇದ್ದರು.

# ಸಮಾನ ಸೌಲಭ್ಯ-ಬೇಡಿಕೆ ಈಡೇರಿಕೆಗೆ ಆಗ್ರಹ

## ಮೇ 26 ರಿಂದ ವಸತಿ ಶಾಲೆಗಳ ಶಿಕ್ಷಕರಿಂದ ಸರಣಿ ಪ್ರತಿಭಟನೆ: ಫ್ರೀಡಂಪಾರ್ಕ್-ಜಿಲ್ಲಾಮಟ್ಟದಲ್ಲಿ ಹೋರಾಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಹಾಗೂ ತಮ್ಮನ್ನೂ ಸರ್ಕಾರಿ ನೌಕರರೆಂದು ಪರಿಗಣಿಸಬೇಕು ಆಗ್ರಹಿಸಿ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲು, ಕರ್ನಾಟಕ ವಸತಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘದಿಂದ ಇದೇ ತಿಂಗಳ 26 ರಿಂದ ಜೂನ್ 2ರ ವರೆಗೂ ವಿವಿಧ ರೀತಿಯ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಇಂದು ಸುದ್ದಿಗೋಷ್ಟಿಯಲ್ಲಿ ಸರಣಿ ಹೋರಾಟದ ರೂಪುರೇಷೆ ವಿವರಿಸಿದ ಜಿಲ್ಲಾ ಸಂಘದ ಅಧ್ಯಕ್ಷೆ ಉಷಾ ಸಿ.ಎನ್., ಮೇ 26 ರಿಂದ 28 ರವರೆಗೆ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದರು.

29 ರಂದು ಶಿಕ್ಷಕರು ಕಪ್ಪುಪಟ್ಟಿ ಧರಿಸಿ ಕರ್ತವ್ಯ ನಿರ್ವಹಿಸುತ್ತೇವೆ. 30 ರಂದು ಜಿಲ್ಲಾಮಟ್ಟದಲ್ಲಿ ತರಗತಿ ಬಹಿಷ್ಕಾರ ಮಾಡುತ್ತೇವೆ. 31 ರಂದು ಪಾದಯಾತ್ರೆ ನಡೆಸಿ ಆಯಾ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸುತ್ತೇವೆ. ಇಷ್ಟಕ್ಕೂ ಸೂಕ್ತ ರೀತಿಯ ಸ್ಪಂದನೆ ಸಿಗದೇ ಹೋದರೆ ಜೂ.2 ರಿಂದ ರಾಜ್ಯಾದ್ಯಂತ ಡಿಸಿ ಕಚೇರಿಗಳ ಎದುರು ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ನಡೆಸಲು ತೀರ್ಮಾನ ಮಾಡಿದ್ದೇವೆ ಎಂದು ವಿವರಿಸಿದರು.

ಬೇರೆ ವಸತಿ ಶಾಲೆಗಳ ಶಿಕ್ಷಕರಿಗೆ ಹೋಲಿಸಿದರೆ ನಾವು ಅನೇಕ ರೀತಿಯ ಸೌಲಭ್ಯಗಳಿಂದ ವಂಚಿತರಾಗಿದ್ದೇವೆ. ಅವುಗಳನ್ನು ಈಡೇರಿಸಿ ಎಂದು ರಾಜ್ಯಾದ್ಯಂತ ಕ್ರೈಸ್ ಸಂಸ್ಥೆಯಡಿ ಇರುವ ಸುಮಾರು 6800 ಮಂದಿ ಇರುವ ಕಾಯಂ ಶಿಕ್ಷಕರು ಕಳೆದ 13 ವರ್ಷಗಳಿಂದ ಹೋರಾಟ ಮಾಡುತ್ತಿದ್ದರೂ, ಯಾವುದೇ ಸ್ಪಂದನೆ ಸಿಕ್ಕಿಲ್ಲ ಎಂದರು.

ಪರಿಶಿಷ್ಟಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ಬಡ ಪ್ರತಿಭಾವಂತ ಮಕ್ಕಳು ಓದುತ್ತಿರುವ, ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಏಕಲವ್ಯ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಮೊದಲಾದ ವಸತಿ ಶಾಲೆಗಳಲ್ಲಿ ಕಲಿಯುತ್ತಿದ್ದು, ಓದುವುದರಿಂದ ಹಿಡಿದು, ಪ್ರತಿಭಾ ಕಾರಂಜಿ ಮೊದಲಾದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ನಮ್ಮ ಶಾಲೆಗಳ ಮಕ್ಕಳೇ ಉತ್ತಮ ಪ್ರತಿಭೆ ಪ್ರದರ್ಶನ ಮಾಡುತ್ತಿದ್ದಾರೆ.

ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ನಮ್ಮ ಶಾಲೆಯ ಮಕ್ಕಳೂ ರಾಜ್ಯಮಟ್ಟದ ರ‍್ಯಾಂಕ್ ಪಡೆಯುತ್ತಿದ್ದಾರೆ. ನಾವು ನೀಡುವ ಗುಣಾತ್ಮಕ ಶಿಕ್ಷಣದಿಂದ ಸರ್ಕಾರಿ ಶಾಲೆಗಳಿಗಿಂತಲೂ ನಮ್ಮ ಶಾಲೆಗಳ ಫಲಿತಾಂಶ ಶೇ.91 ಕ್ಕಿಂತಲೂ ಅಧಿಕ ಇದೆ. ಇದಕ್ಕೆ ನಾವು 24★7 ಮಾದರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದೂ ಕಾರಣ. ಆದರೂ ನಮಗೆ ಕೊಡಬೇಕಾದ ಸೌಲಭ್ಯ ಕೊಡದೆ ತಾರತಮ್ಯ ಮಾಡಲಾಗುತ್ತಿದೆ ಎಂದು ದೂರಿದರು.

ನಾವು 6-10 ನೇ ತರಗತಿ ವರೆಗೂ ಬೋಧನೆ ಮಾಡುತ್ತಿದ್ದೇವೆ. ಗುಣಮಟ್ಟ ಹಾಗೂ ಮೌಲ್ಯಯುತ ಶಿಕ್ಷಣ ನೀಡುತ್ತಿರುವುದರಿಂದ 52 ಸಾವಿರ ಮಕ್ಕಳು ಸಾಮರ್ಥ್ಯದ ವಸತಿ ಶಾಲೆಗಳ ಪ್ರವೇಶಕ್ಕಾಗಿ ಬರೋಬ್ಬರಿ 2.70ಲಕ್ಷ ಅರ್ಜಿ ಬಂದಿವೆ.

ಒಟ್ಟಾರೆಯಾಗಿ ನಾವು ಸರ್ಕಾರಿ ಶಿಕ್ಷಕರಿಗಿಂತ ಹೆಚ್ಚು ಕೆಲಸ ಮಾಡಿದರೂ, ಅವರಂತೆಯೇ ಸಮಾನವಾದ ಸೌಲಭ್ಯ ಇಲ್ಲವಾಗಿದೆ. ಜಿ.ಕುಮಾರನಾಯಕ್ ವರದಿ ಸೌಲಭ್ಯ ನಮಗೆ ಸಿಕ್ಕಿಲ್ಲ ಎಂದರು.

ಸುದ್ದಿಗೋಷ್ಟಿಯಲ್ಲಿ ಜಿಲ್ಲಾ ಸಂಘದ ಪದಾಧಿಕಾರಿಗಳಾದ ಶಂಕರ್, ನೇಹಾಲ್, ಕೀರ್ತಿ ಇದ್ದರು.

### ಶಿಕ್ಷಕರ ಬೇಡಿಕೆಗಳೇನು

ಸಂಘದ ಉಪಾಧ್ಯಕ್ಷ ಮಂಜುನಾಥ್ ಮಾತನಾಡಿ, ನಮ್ಮನ್ನೂ ಸರ್ಕಾರಿ ನೌಕರರೆಂದು ಪರಿಗಣಿಸುವಂತಾಗಲು ನಿರ್ದೇಶನಾಲಯ ರಚನೆ ಮಾಡಬೇಕು. ಇಲ್ಲವಾದರೆ ಆಯಾಯ ಇಲಾಖೆಗಳ ವ್ಯಾಪ್ತಿಗೆ ನಮ್ಮ ಶಾಲೆಗಳನ್ನು ವಿಲೀನ ಮಾಡಬೇಕು ಎಂದು ಒತ್ತಾಯಿಸಿದರು.

ಅಪಘಾತ ಮತ್ತಿತರ ಸಂದರ್ಭಗಳಲ್ಲಿ ನೆರವಾಗಲು ಜ್ಯೋತಿ ಸಂಜೀವಿನಿ ಆರೋಗ್ಯ ಯೋಜನೆ ವ್ಯಾಪ್ತಿಗೆ ನಮ್ಮನ್ನೂ ಸೇರಿಸಬೇಕು. ನಮ್ಮ ತಿಂಗಳ ಸಂಬಳದಲ್ಲಿ ಬಾಡಿಗೆ ಭತ್ಯೆಯನ್ನು ಕಟಾವಣೆ ಮಾಡಬಾರದು. ಬೇರೆ ವಸತಿ ಶಾಲೆಗಳ ಶಿಕ್ಷಕರಿಗೆ ನೀಡುತ್ತಿರುವಂತೆ ಸಂಪೂರ್ಣ ಸಂಬಳ ಪಾವತಿ ಮಾಡಬೇಕು. ಇತರರಿಗೆ ಕೊಡುತ್ತಿರುವಂತೆಯೇ ನಮಗೂ ಶೇ.10 ರಷ್ಟು ವಿಶೇಷ ಭತ್ಯೆ ನೀಡಬೇಕು ಎಂದು ಆಗ್ರಹಿಸಿದರು. ಹಾಗೆಯೇ ಕರ್ನಾಟಕ ಆರೋಗ್ಯ ಸಂಜೀವಿನಿ ಸೌಲಭ್ಯ ನಮಗೂ ಸಿಗಬೇಕು. ಮರಣ-ನಿವೃತ್ತಿ ಉಪಧನ(ಡಿಸಿಆರ್‌ಜಿ) ನಮಗೂ ಸಿಗಬೇಕು ಎಂದು ಮನವಿ ಮಾಡಿದರು.

# ವಿನಿ ಸಾಜನ್ ವಿಕ್ಟರ್‌ಗೆ ಡಾಕ್ಟರೇಟ್ ಪದವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಜಿಲ್ಲೆಯ ಬಾಳ್ಳುಪೇಟೆಯ ಎ.ವಿಕ್ಟರ್ ಮತ್ತು ಪಿ.ಜೆ.ಹೆಲೆನ್ ಅವರ ದಂಪತಿ ಪುತ್ರ ವಿನಿ ಸಾಜನ್ ವಿಕ್ಟರ್ ಅವರು ಜರ್ಮನಿಯ ಪ್ರತಿಷ್ಠಿತ ಯೂನಿವರ್ಸಿಟಿ ಕೈಜರ್ ಸ್ಲೌಟನ್‌ನಲ್ಲಿ ಡಾಕ್ಟರೇಟ್ ಪದವಿ ಪಡೆದು ಕೀರ್ತಿ ತಂದಿದ್ದಾರೆ.

ವಿನಿ ಸಾಜನ್ ವಿಕ್ಟರ್ ಅವರು ಎಂ.ಎಸ್. ಪದವಿಯಲ್ಲಿ ಮಾಸ್ಟರ್ಸ್ ಇನ್ ಕಂಪ್ಯೂಟರ್ ಸೈನ್ಸ್ ಸ್ಪೆಷಲೈಸಿಂಗ್ ಇನ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ವಿಷಯದಲ್ಲಿ ವ್ಯಾಸಂಗ ಮಾಡಿದ್ದಾರೆ.

ಅಲ್ಲದೆ ಕೈಜ್ಜರ್ ಸ್ಲೌಟರ್ನ್ ಯೂನಿವರ್ಸಿಟಿ, ಜರ್ಮನಿಯಲ್ಲಿ ಇನ್ ಫಾರ್ವರ್ಡ್ ಮಶೀನ್ ಲರ್ನಿಂಗ್ ಅಂಡ್ ವಿಜುವಲ್ ಅನಾಲಿಟಿಕ್ಸ್ ಫಾರ್ ವಿರ್ಚುವಲ್ ಸ್ಪಿನ್ನಿಂಗ್ ನಲ್ಲಿ ಡಾಕ್ಟರೇಟ್ ಪದವಿ ಪಡೆದುಕೊಂಡಿದ್ದಾರೆ.

ವಿನಿ ಸಾಜನ್ ವಿಕ್ಟರ್ ತಮ್ಮ ಹುಟ್ಟೂರು ಬಾಳ್ಳುಪೇಟೆಯಲ್ಲಿಯೇ ತಮ್ಮ ಪ್ರಾಥಮಿಕ ಶಿಕ್ಷಣ ಮುಗಿಸಿದ್ದು, ಬೆಂಗಳೂರಿನ ಸಿಎಂಆರ್‌ಐಟಿ ಕಾಲೇಜಿನಲ್ಲಿ ತಮ್ಮ ಇಂಜಿನಿಯರ್ ಪದವಿ ಪೂರ್ಣಗೊಳಿಸಿದರು.

ಬಳಿಕ ಬಾಷ್ ಕಂಪೆನಿಯಲ್ಲಿ ಮೂರು ವರ್ಷದ ಅನುಭವ ಪಡೆದುಕೊಂಡು ಎಂ.ಎಸ್.ಪದವಿ ವ್ಯಾಸಂಗಕ್ಕಾಗಿ ಜರ್ಮನಿಗೆ ತೆರಳಿ ಕೈಜರ್ ಸ್ಲೌಟರ್ನ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದುಕೊಂಡರು. ಇನ್ನು ಅದೇ ವಿಶ್ವವಿದ್ಯಾನಿಲಯ ದಲ್ಲಿ ಪಿಎಚ್‌ಡಿ ಪದವಿಗೆ ಪ್ರವೇಶ ಪಡೆದು ಡಾಕ್ಟರೇಟ್ ಪಡೆದುಕೊಂಡಿದ್ದಾರೆ. ಬಾಷ್ ಕಂಪೆನಿಯಲ್ಲಿ ಆಟೋಮೋಟಿವ್ ಇಂಡಸ್ಟ್ರಿಯಲ್ಲಿ ವೃತ್ತಿಯಲ್ಲಿ ಇದ್ದಾಗ ಅಲ್ಲಿನ ಡ್ರೈವರ್‌ಲೆಸ್ ಕಾರ್ ಮತ್ತು ಆರ್ಟಿಫಿಶಿಯಲ್ ಇಂಟಲಿಜನ್ಸ್ ನಂತಹ ವಿಷಯಗಳಲ್ಲಿ ಆಸಕ್ತಿ ಬೆಳೆಸಿ ಕೊಂಡಿದ್ದರು. ಹೀಗಾಗಿ ಉನ್ನತ ಮಟ್ಟದ ವಿದ್ಯಾಭ್ಯಾಸಕ್ಕಾಗಿ ಜರ್ಮನಿಗೆ ತೆರಳಿದ್ದರು.

# ನಿರಂತರ ಮಳೆ



ಹಾಸನ : ಕೇರಳಕ್ಕೆ ಮುಂಗಾರು ಪ್ರವೇಶ ಮಾಡುತ್ತಿದ್ದಂತೆಯೇ ಜಿಲ್ಲೆಯಲ್ಲೂ ಮಳೆ ಆರ್ಭಟ ಜೋರಾಗಿದೆ. ಬೆಳಗ್ಗೆಯಿಂದಲೇ ಬಿಟ್ಟು ಬಿಟ್ಟು ಸುರಿಯುತ್ತಿದ್ದ ಮಳೆ ಮಧ್ಯಾಹ್ನ ನಂತರ ಧೋ ಎಂದು ಸುರಿಯಲಾರಂಭಿ ಸಿತು. ಜಿಲ್ಲೆಯ ಹಲವೆಡೆ ಮಲೆನಾಡು ಭಾಗದಲ್ಲಿ ಎಡೆಬಿಡದೆ ವರ್ಷಧಾರೆ ಸುರಿಯಲಾರಂಭಿಸಿದ್ದರಿಂದ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿತ್ತು.

ಮಲೆನಾಡು ಭಾಗದಲ್ಲೂ ಎಡೆಬಿಡದೆ ಮಳೆ ಸುರಿಯುತ್ತಿದೆ. ಸಕಲೇಶಪುರ, ಆಲೂರು, ಬೇಲೂರು, ಭಾಗದಲ್ಲಿ ಬಿರುಗಾಳಿ ಸಹಿತ ಮಳೆಯಾಗುತ್ತಿದೆ. ಹಲವೆಡೆ ಜಿಟಿಜಿಟಿ ಮಳೆಯಾಗುತ್ತಿದ್ದು, ಜಿಲ್ಲೆಯ ಬಹುತೇಕ ಕಡೆ ಮೋಡ ಕವಿದ ವಾತಾವರಣವಿದೆ. ಬಿರುಗಾಳಿ, ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿದ್ದು ವಾಹನ ಸವಾರರು, ವಿದ್ಯಾರ್ಥಿಗಳು, ಸಾರ್ವಜನಿಕರ ಪರದಾಡುವಂತಾಗಿದೆ.

ಕಳೆದ ಒಂದು ವಾರದಿಂದ ಹಾಸನ ಜಿಲ್ಲೆಯಲ್ಲಿ ಮಳೆ ಸುರಿಯುತ್ತಿದ್ದು ನಿರಂತರ ಮಳೆಯಿಂದ ಕೃಷಿ ಚಟುವಟಿಕೆಗೆ ತೊಡಕುಂಟಾಗಿದೆ. ಆದರೆ ಯಗಚಿ ಜಲಾಶಯ ಭರ್ತಿಯಾಗಿರುವುದು ಸಂತಸ ತರಿಸಿದೆ.

# ಟಯೋಟಾ ಕಾರು ಕಳವು

ಹಾಸನ: ಸೆಕೆಂಡ್ ಹ್ಯಾಂಡ್ ಷೋರೂಂನಲ್ಲಿ ಮಾರಾಟ ಮಾಡಲು ನಿಲ್ಲಿಸಿದ್ದ 7.75 ಲಕ್ಷ ರೂ. ಬೆಲೆಯ ಟಯೋಟಾ ಕಾರು ಹಾಗೂ 5 ಸಾವಿರ ಬೆಲೆಯ ಸಿಸಿಟಿವಿ ಡಿವಿಆರ್ ಕಳವು ಮಾಡಲಾಗಿದೆ.

ನಗರದ ಹುಣಸಿನಕೆರೆ ಬಡಾವಣೆ, ಸಂತೇಪೇಟೆ ಸರ್ಕಾರಿ ಶಾಲೆ ಹಿಂಭಾಗದ ವಾಸಿ ಮಹಮ್ಮದ್ ಯೂಸಫ್ ಖಾನ್ ಅವರು ಮಂಜುನಾಥ್ ಆಯುರ್ವೇದಿಕ್ ಕಾಲೇಜು ಎದುರಿನ ಏಷಿಯನ್ ಕಾರ್ಸ್ ಎಂಬ ಸೆಕೆಂಡ್ ಹ್ಯಾಂಡ್ ಕಾರ್ ಶೋರೂಂ ಮಾಲೀಕರಾಗಿದ್ದಾರೆ.

ಮೇ 22 ರಂದು ರಾತ್ರಿ 9 ಗಂಟೆಗೆ ಶೋರೂಂನ ಆಫೀಸ್ ಮತ್ತು ಗೇಟ್‌ಗಳಿಗೆ ಬೀಗ ಹಾಕಿಕೊಂಡು ಮನೆಗೆ ಹೋಗಿದ್ದರು.

ಮಾರನೇ 23 ರಂದು ಬೆಳಿಗ್ಗೆ 9.30 ಗಂಟೆಗೆ ಷೋರೂಂ ಹತ್ತಿರ ಬಂದು ನೋಡಲಾಗಿ ರಾತ್ರಿ ವೇಳೆ ಕಳ್ಳರು ಷೋರೂಂನ ಬೀಗ ಮತ್ತು ಆಫೀಸ್‌ನ ಬೀಗ ಒಡೆದು ಒಳಗೆ ಪ್ರವೇಶಿಸಿ ಆಫೀಸಿನ ಡ್ರಾ ಬೀಗ ಮುರಿದು ಡ್ರಾಯರ್‌ನಲ್ಲಿಟ್ಟಿದ್ದ ಕೀ ತೆಗೆದುಕೊಂಡು ಮಾರಾಟ ಮಾಡಲೆಂದು ಇಟ್ಟಿದ್ದ ಟೊಯೋಟಾ ಕಂಪನಿಯ ಕೆಎ-02-ಎಂಜೆ-5769 ನಂಬರಿನ ಬಿಳಿ ಬಣ್ಣದ ಕಾರು ಮತ್ತು ಆಫೀಸಿಗೆ ಅಳವಡಿಸಿದ್ದ ಸಿಸಿಟಿವಿ ಡಿ.ವಿ.ಆರ್‌ನ್ನು ಕಳವು ಮಾಡಿಕೊಂಡು ಹೋಗಿದ್ದಾರೆ. ಈ ಸಂಬಂಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

